# CHAMUNDESHWARI ELECTRICITY SUPPLY CORPORATION LIMITED

( AGOVT.ofkarnataka undertaking)

Corporate office address
No 29, KaveriGrameena Bank Road,
2nd Stage, Vijayanagara, Hinkal,
Mysore-570017. CIN:U40109KA2004SGC035177

Office of the Assistant Exe, Eng(E)
CESC, O&M,Sub-Division,
Saligrama.

TO NO:CESC/SLGR/AEE(E)/AE(T)/17-18/NO: 769 Date: 17.10.2017

ದಿನಾಂಕ; 12.10.2017 ರಂದು ಶ್ರೀ. ಸನ್ಮಾನ್ಯ ನರಸಿಂಹೇಗೌಡ್ರು, ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಮೈಸೂರುರವರ ಅಧ್ಯಕ್ಷತೆಯಲ್ಲಿ ಕೆ.ಇ.ಆರ್.ಸಿ ನಿರ್ದೇಶನದ ಮೇರೆಗೆ ಉಪ ವಿಭಾಗ ಮಟ್ಟದ ಜನ ಸಂಪರ್ಕ ಸಭೆಯನ್ನು ಸಾಲಿಗ್ರಾಮ ಉಪ ವಿಭಾಗ ಕಛೇರಿಯಲ್ಲಿ ನಡೆಸಲಾದ ಸಭೆಯ ನಡವಳಿಕೆಗಳು.

ಸಭಾಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನೀಕರನ್ನು ಸ್ವಾಗತಿಸಿ ಸಭೆಯನ್ನು ಬೆಳಿಗ್ಗೆ: 11:00 ಕ್ಕೆ ಪ್ರಾರಂಭಿಸಿದರು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :

1. ಶ್ರೀ. ನಾಗೇಶ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ, ಹುಣಸೂರು.
2. ಶ್ರೀ. ಸಿದ್ದಪ್ಪ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಉಪವಿಭಾಗ, ಸಾಲಿಗ್ರಾಮ.
3. ಶ್ರೀ ಗೋವಿಂದಶೆಟ್ಟಿ, ಹಿರಿಯ ಸಹಾಯಕರು, ಕಂದಾಯ ಶಾಖೆ, ಸಾಲಿಗ್ರಾಮ ಉಪ ವಿಭಾಗ,
4. ಶ್ರೀ ಸುನೀಲ್ ಯಾದವ್, ಸಹಾಯಕ ಇಂಜಿನಿಯರ್(ವಿ), ಸಾಲಿಗ್ರಾಮ ಶಾಖೆ,
5. ಶ್ರೀ ಎಸ್. ಸುರೇಶ, ಕಿರಿಯ ಇಂಜಿನಿಯರ್ (ವಿ) ಭೇರ್ಯ ಶಾಖೆ,
6. ಶ್ರೀ ಶಿವಣ್ಣ, ಕಿರಿಯ ಇಂಜಿನಿಯರ್ (ವಿ) ಮಿರ್ಲೆ ಶಾಖೆ,

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಾರ್ವಜನೀಕರರು ಹಾಗು ಪತ್ರಕರ್ತರು ಜೊತೆಯಲ್ಲಿ ಈ ಕೆಳಗಿನ ಸಾರ್ವಜನೀಕರ ಕುಂದು ಕೊರತೆಗಳನ್ನು ದಾಖಲೆ/ನಿವಾರಿಸಲು/ಚರ್ಚಿಸಲಾಯಿತು.

ಮುಂದುವರೆದಿದೆ.,

ಸಭೆಯಲ್ಲಿ ಈ ಕೆಳಕಂಡ ಕುಂದು ಕೊರತೆಯನ್ನು ಗ್ರಾಹಕರಿಂದ/ಸಾರ್ವಜನಿಕರುಗಳಿಂದ ದೂರುಗಳನ್ನು/ಮನವಿಗಳನ್ನು ಸ್ವೀಕರಿಸಲಾಯಿತು.

| ಕ್ರ.ಸ | ಅರ್ಜಿದಾರ ವಿಳಾಸ | ಮೊಬೈಲ್ ಸಂಖ್ಯೆ | ಗ್ರಾಮ | ಮನವಿಯ ವಿವರ | ಸಮುಜಾಯಿಷಿ ಉತ್ತರ |
|---|---|---|---|---|---|
| 1 | ಕಾಂತಾಮಣಿ ಕೋಂ ಗೋವಿಂದೇಗೌಡ | | ಮೂಡಲಬೀಡು | ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿಸಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿರುತ್ತಾರೆ. | ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸಿದ್ದು ಶೀಘ್ರದಲ್ಲಿ ಕಾಮಗಾರಿಯನ್ನು ನಿರ್ವಹಿಸುತ್ತೇವೆಂದು ತಿಳಿಯಪಡಿಸಲಾಗಿದೆ |
| 2 | ನಾಗೇಂದ್ರ ಎಲ್.ಟಿ | | ಲಕ್ಷ್ಮೀಪುರ | ಲಕ್ಷ್ಮೀಪುರದ ಐ.ಪಿ. ಸ್ಥಾವರದ ಪರಿವರ್ತಕವು ವಿಫಲಗೊಂಡಿದ್ದು, ಪರಿವರ್ತಕವನ್ನು ಬದಲಾಯಿಸುವಂತೆ ಮತ್ತು ಈ ಪರಿವರ್ತಕವು ಗದ್ದೆಯ ಮದ್ಯ ಭಾಗದಲ್ಲಿ ಇದ್ದು, ಈ ಪರಿವರ್ತಕ ಕೇಂದ್ರವನ್ನು ಬದಲಾಯಿಸುವಂತೆ ಕೋರಿರುತ್ತಾರೆ. | ವಿಫಲಗೊಂಡಿರುವ ಪರಿವರ್ತಕಕ್ಕೆ ಕಾರ್ಯದೇಶ ಸಂಖ್ಯೆಯನ್ನು ಪಡೆಯಲಾಗಿದ್ದು 02 ದಿನಗಳ ಒಳಗಾಗಿ ಬದಲಾಯಿಸಲಾಗುವ್ವದೆಂದು ತಿಳಿಸಲಾಗಿದ್ದು ಹಾಗು ಪರಿವರ್ತಕ ಕೇಂದ್ರವನ್ನು ಬದಲಾಯಿಸಲು ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ನೀಡಲು ಸಾಲಿಗ್ರಾಮ ಶಾಖಾದಿಕಾರಿಯವರಿಗೆ ಸೂಚಿಸಲಾಗಿದೆ. |
| 3 | ಅಯಮ್ಮ ಕೋ ಲೇಟ್. ಎಸ್.ಆರ್. ವೆಂಕಟೇಗೌಡ, ಅಗಲೇರಿ ಬೀದಿ | 8296169071 | ಸಾಲಿಗ್ರಾಮ | ಸದರಿರವರ ಪಂಪ್ ಸೆಟ್ ಸ್ಥಾವರವು ಇದ್ದು ಹಲವು ತಿಂಗಳಿನಿಂದ ಈ ಪಂಪೆ ಸೆಟ್‌ನ್ನು ಬಳಕೆ ಮಾಡುತ್ತಿರಲಿಲ್ಲ. ಈ ಹಿಂದೆ ಈ ಸ್ಥಾವರಕ್ಕೆ ಎಳೆದಿದ್ದ ಎಲ್.ಟಿ ವೈರನ್ನು ಕಳಚಿರುತ್ತಾರೆ. ಈಗ ನಮ್ಮ ಪಂಪ್‌ಸೆಟ್ ಸ್ಥಾವರವನ್ನು ಚಾಲನೆಗೊಳಿಸಲು ಎಲ್.ಟಿ ವೈರ್‌ನ್ನು ಎಳೆದು ಸಂಪರ್ಕ ನೀಡಲು ಕೋರಿರುತ್ತಾರೆ. | ಸ್ಥಳ ಪರಿಶಿಲಿಸಿ ಪಂಪೆ ಸೆಟ್ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ನೀಡುವಂತೆ ಸಾಲಿಗ್ರಾಮ ಶಾಖಾಧಿಕಾರಿಯವರಿಗೆ ಸೂಚಿಸಲಾಗಿದೆ. |
| 4 | ರವೀಶ | 9731252550 | ಶೀಗೆವಾಳು | ವ್ಯವಸಾಯದ ಭೂಮಿಯ ಮಧ್ಯಭಾಗದಲ್ಲಿ ವಿದ್ಯುತ್ ಕಂಬಗಳನ್ನು ನೆಟ್ಟಿರುವುದಕ್ಕೆ ತಕರಾರು ಅರ್ಜಿ ನೀಡಿರುತ್ತಾರೆ | ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸಾಲಿಗ್ರಾಮ ಶಾಖಾಧಿಕಾರಿಯವರಿಗೆ ಸೂಚಿಸಲಾಗಿದೆ. |
| 5 | ವೀರಭದ್ರಪ್ಪ ಬಿನ್ ಲೇಟ್. ನಿಂಗಪ್ಪ | 9741939663 | ತಂದ್ರೆ | ಸದರಿರವರ ಉದ್ದೇಶಿತ ಮನೆಯ ಮೇಲೆ ಇಲಾಖಾ ತಂತಿಯು ಹಾದು ಹೋಗಿದ್ದು ಈ ವಿದ್ಯುತ್ ಮಾರ್ಗವನ್ನು ಬೇರೆಡೆಗೆ ಸ್ಥಳಾಂತರಿಸಿಕೊಡುವಂತೆ ಕೋರಿರುತ್ತಾರೆ. | ಸ್ಥಳ ಪರಿಶೀಲಿಸಿ ಸದರಿಯವ ಮನೆಯ ಮೇಲೆ ಹಾದು ಹೋಗಿರುವ ಇಲಾಖಾ ತಂತಿಗಳನ್ನು ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಾಲಿಗ್ರಾಮ ಶಾಖಾಧಿಕಾರಿಯವರಿಗೆ ಸೂಚಿಸಲಾಗಿದೆ. |
| 6 | ಟಿ. ರಮೇಶ ಬಿನ್ ಲೇಟ್. ತಿಮ್ಮೇಗೌಡ | 9743335702 | ಮೂಡಲಬೀಡು | ಸದರಿರವರ ಗೃಹಬಳಕೆ ಸ್ಥಾವರ ಸಂಖ್ಯೆ: **KRATL-32394** ಮೀಟರನ್ನು ಸದರಿರವರು ಹೊಸದಾಗಿ ನಿರ್ಮಾಣ ಮಾಡಿರುವ ಮನೆಗೆ ಸ್ಥಳಾಂತರಿಸಿಕೊಡುವಂತೆ ಕೋರಿರುತ್ತಾರೆ. | ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಾಲಿಗ್ರಾಮ ಶಾಖಾಧಿಕಾರಿಯವರಿಗೆ ಸೂಚಿಸಲಾಗಿದೆ. |
| 7 | ಗೋವಿಂದ ಎಮ್.ಎಸ್ | 8861536107 | ಮುಂಡೂರು | ಸದರಿರವರ ಮನೆಯ ಪಕ್ಕದ್ದಲ್ಲಿ 7.5 ಮೀಟರ್ ಕಂಬವಿದ್ದು ಇದರಿಂದ ಮನೆಗೆ ಅಡಚಣೆಯಾಗುತ್ತಿದ್ದು, 7.5 ಮೀಟರ್ ಬದಲಾಗಿ 09 ಮೀಟರ್ ಕಂಭ ಅಳವಡಿಸಿ ಸ್ಥಳ ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ. | ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಾಲಿಗ್ರಾಮ ಶಾಖಾಧಿಕಾರಿಯವರಿಗೆ ಸೂಚಿಸಲಾಗಿದೆ. |
| 8 | ಜಗದೀಶ | 9945664955 | ಸಾಲಿಗ್ರಾಮ | ಸಾಲಿಗ್ರಾಮ ಹಾರಂಗಿ ಕಾಲೋನಿ ಹತ್ತಿರ ಇರುವ 250 ಕೆವಿಎ ಪರಿವರ್ತಕ ಕೇಂದ್ರದ ಕಂಬಗಳು ಶಿಥಿಲಗೊಂಡಿದ್ದು ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ. | ಸ್ಥಳ ಪರಿಶೀಲಿಸಿ ಶಿಥಿಲಗೊಂಡಿರುವ ಪರಿವರ್ತಕ ಕೇಂದ್ರದ ಕಂಭಗಳನ್ನು ಬದಲಾಯಿಸಲು ಅಂದಾಜು ಪಟ್ಟಿಯನ್ನು ನೀಡುವಂತೆ ಸಾಲಿಗ್ರಾಮ ಶಾಖಾಧಿಕಾರಿಯವರಿಗೆ ಸೂಚಿಸಲಾಗಿದೆ. |

| | | | | | |
|---|---|---|---|---|---|
| 9 | ರಾಮಯ್ಯ | | ಹೊಸ ಅಗ್ರಹಾರ | ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾಗಿದ್ದು, ವಿದ್ಯುತ್ ಸಂಪರ್ಕ ನೀಡಲು ವಿಳಂಬವಾಗಿರುವ ಬಗ್ಗೆ. | ಸದರಿರವರ ಗಂಗಾ ಕಲ್ಯಾಣ ಯೋಜನೆಯ ಅಂದಾಜು ಪಟ್ಟಿಗೆ ವಿಭಾಗಿಯ ಕಛೇರಿಯಿಂದ ಕಾರ್ಯದೇಶ ಸಂಖ್ಯೆ ಮಂಜೂರಾಗಿದ್ದು ಶೀಘ್ರದಲ್ಲೆ ಕಾಮಗಾರಿಯನ್ನು ಪೂರ್ಣಗೊಳಿಸಿ ವಿದ್ಯುತ್ ಸಂಪರ್ಕ ನೀಡಲಾಗುವುದೆಂದು ಅರ್ಜಿದಾರಾರಿಗೆ ತಿಳಿಯಪಡಿಸಲಾಯಿತು. |
| 10 | ಹೆಚ್. ಎಸ್. ಮಂಜುನಾಥ ಬಿನ್ ಶಿವಲಿಂಗಪ್ಪ | 9663992727 | ಹೊಸ ಅಗ್ರಹಾರ | ಹೊಸ ಅಗ್ರಹಾರ ಗ್ರಾಮದಲ್ಲಿ 08 ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿರುತ್ತಾರೆ. | ಸದರಿ ಸ್ಥಾವರಗಳನ್ನು ಪರಿಶಿಲಿಸಿ ನೀರಂತರ ವಿದ್ಯುತ್ ಜಾಲಕ್ಕೆ ಸೇರ್ಪಡಿಸಲು ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿ ಭೇರ್ಯ ರವರಿಗೆ ಸೂಚಿಸಲಾಗಿದೆ |
| 11 | ನಾರಾಯಣ ಬಿನ್ ರಾಮೇಗೌಡ | | ಸಂಬ್ರವಳ್ಳಿ | ವಿದ್ಯುತ್ ಗುತ್ತಿಗೆದಾರರಾದ ಶ್ರೀ ರೇಣುಕಪ್ರಸಾದ್ ಇವರು ಐ.ಪಿ ಸ್ಥಾವರಕ್ಕೆ ಸಂಪರ್ಕ ನೀಡಲು ಗುತ್ತಿಗೆದಾರರು ಹಣ ಪಡೆದು ಇದುವರೆವಿಗೂ ರಶೀಥಿಯನ್ನು ನೀಡಿರುವುದಿಲ್ಲವೆಂದು ದೂರು ನೀಡಿರುತ್ತಾರೆ. | ಅರ್ಜಿದಾರರ ದೂರಿನ ಅನ್ವಯ ಸದರಿ ಗುತ್ತಿಗೆದಾರರನ್ನು ಸಂಪರ್ಕಿಸಿ ಇಲಾಖಾ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸ//ಕಾ//ನಿ// ಇಂಜಿನಿಯರ್ ರವರಿಗೆ ಸೂಚಿಸಲಾಯಿತು. |

ಸಭೆಯಲ್ಲಿದ್ದ ಸಾರ್ವಜನೀಕರ ಮತ್ತು ಪತ್ರಕರ್ತರಿಗೆ ವಂದಿಸಿ ಮೇಲೆ ತಿಳಿಸಿರುವ ಎಲ್ಲಾ ಕುಂದು ಕೋರತೆಗಳನ್ನು ಮುಂದಿನ ಜನ ಸಂಪರ್ಕ ಸಭೆಯ ಒಳಾಗಾಗಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿ ಮತ್ತು ಆದ್ಯತೆ ಮೇರೆಗೆ ಕ್ರಮವಹಿಸುವಂತೆಯೂ ಸಂಬಂದ ಪಟ್ಟ ಅಧಿಕಾರಿಗಳಿಗೆ ಪ್ರತೀ ದಿನ ಈ ಸಂಬಂಧ ಪರಾಮರ್ಶಿಸುವಂತೆ ಸೂಚಿಸಿ ಸಭೆಯನ್ನು ಮದ್ಯಾಹ್ನ 02:30 ಕ್ಕೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಉಪ ವಿಭಾಗ, ಸೆಸ್ಕ್, ಸಾಲಿಗ್ರಾಮ.

ಪ್ರತಿಯನ್ನು ತಮ್ಮ ಆದ್ಯ ಗಮನಕ್ಕೆ ಸಲ್ಲಿಸಲಾಗಿದೆ:-

1. ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೈಸೂರು ವಲಯ, ಚಾವಿಸನಿನಿ. ಮೈಸೂರುರವರ ಆದ್ಯ ಗಮನಕ್ಕಾಗಿ
2. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ, ವೃತ್ತ, ಸೆಸ್ಕ್, ಮೈಸೂರುರವರ ಆದ್ಯ ಗಮನಕ್ಕಾಗಿ.
3. ಕಾರ್ಯಪಾಲಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಸೆಸ್ಕ್, ಹುಣಸೂರುರವರ ಆದ್ಯಗಮನಕ್ಕಾಗಿ.

ಪ್ರತಿಗಳನ್ನು:-

4. ಸಹಾಯಕ ಇಂಜಿನಿಯರ್(ತಾಂತ್ರಿಕ), ಉಪ ವಿಭಾಗ, ಸಾಲಿಗ್ರಾಮ ರವರ ಮಾಹಿತಿಗಾಗಿ.
5. ಹಿರಿಯ ಸಹಾಯಕರು, ಸೆಸ್ಕ್, ಉಪ ವಿಭಾಗ, ಸಾಲಿಗ್ರಾಮ ರವರ ಮಾಹಿತಿಗಾಗಿ.
6. ಶಾಖಾಧಿಕಾರಿಗಳು, ಸಾಲಿಗ್ರಾಮ, ಮಿರ್ಲೆ, ಭೇರ್ಯ ರವರ ಮಾಹಿತಿಗಾಗಿ.
7. ಕಛೇರಿ ಕಡತಕ್ಕೆ.